ಚರಿತ್ರೆ

# ಸಂಸತ್ ಭವನದಲ್ಲಿ ಅಶೋಕನ ಮೊಹರು




**ಸಂಸತ್ತಿನ ನೂತನ ಭವನದ ಭಿತ್ತಿಯಲ್ಲಿ ಅಶೋಕನ ಶಾಸನದ ಪ್ರತಿರೂಪ ಅನಾವರಣವಾಗಿದೆ. ಉತ್ತರ ದಿಕ್ಕಿನ ಮೌರ್ಯರು, ದಕ್ಷಿಣ ದಿಕ್ಕಿನ ಶಾತವಾಹನ ಸಾಮ್ರಾಜ್ಯದ ನಕ್ಷೆಯೂ ಸಂಸತ್ ಭವನವನ್ನು ಅಲಂಕರಿಸಿದೆ.**

**■ ರಾಘವೇಂದ್ರ ಕೆ.**

ನೂತನ ಸಂಸತ್ ಭವನದಲ್ಲಿ ದ್ರಾವಿಡ ನೆಲೆಯ ನೆನಪುಗಳು ಅನಾವರಣವಾಗುತ್ತಿವೆ. ಭವನದ ಉದ್ಘಾಟನೆಯ ವೇಳೆ ರಾಜದಂಡ ‘ಸೆಂಗೋಲ್’ಅನ್ನು ಸಭಾಧ್ಯಕ್ಷರ ಸ್ಥಾನದ ಪಕ್ಕದಲ್ಲಿ ಸ್ಥಾಪಿಸಲಾಯಿತು. ದಂಡದ ತಲೆಯ ಭಾಗದಲ್ಲಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ದಂಡವನ್ನು ಚೋಳ ವಂಶದ ದೊರೆಗಳು ಬಳಸುತ್ತಿದ್ದರು ಎನ್ನಲಾಗಿದೆ. ಅದರ ಬಗ್ಗೆ ವಿವಾದದ ಮಾತುಗಳೂ ಕೇಳಿಬಂದಿದ್ದವು. ಅದರ ಜೊತೆಗೆ ಸಮರ್ಥನೆಯ ದನಿಯೂ ಕೂಡಿತ್ತು. ಸಿಂಧೂ ನಾಗರಿಕತೆಯ ಕಾಲದಿಂದಲೂ ನಂದಿಯನ್ನು ಪವಿತ್ರ ಎಂದು ಆರಾಧಿಸುವುದು ಕಂಡುಬಂದಿದೆ. ಕೃಷಿ ಪ್ರಧಾನ ಸಂಸ್ಕೃತಿಯನ್ನು ಹೊಂದಿರುವ ಭಾರತದಲ್ಲಿ ನಂದಿ ಗುರುತಿನ ರಾಜದಂಡ ಮಾಡಿರುವುದು ಔಚಿತ್ಯಪೂರ್ಣ ಎಂದು ಹೇಳಲಾಯಿತು. ವಾದ–ಪ್ರತಿವಾದ ಏನೇ ಇದ್ದರೂ ದಂಡ ಪ್ರತಿಷ್ಠಾಪಿಸಿರುವುದು ಮಾತ್ರ ವಾಸ್ತವ ಚರಿತ್ರೆ.

ಅದರ ಬೆನ್ನಿಗೆ ಅದೇ ಭವನದಲ್ಲಿ ಕರ್ನಾಟಕದ ಕುರುಹುಗಳೂ ಸ್ಥಾನ ಪಡೆದುಕೊಂಡಿವೆ. ಭಾರತದ ಚರಿತ್ರೆಯಲ್ಲಿ ಚಕ್ರವರ್ತಿ ಎಂದು ದಾಖಲಾಗಿರುವ ಏಕಮಾತ್ರ ದೊರೆ ಅಶೋಕ. ಆತ ಯುದ್ಧ ವೈರಾಗ್ಯದ ಕಾರಣಕ್ಕೆ ಇಂದಿಗೂ ವಿಶ್ವಮಾನ್ಯನಾಗಿದ್ದಾನೆ. ಅಂತಹ ಮಹಾಪುರುಷನನ್ನು ದೇವರಿಗೆ ಸಮಾನವಾದ ದೊರೆ ಎಂದು ಶಾಸನಗಳಲ್ಲಿ ಬಣ್ಣಿಸಲಾಗಿದೆ. ಆದರೆ, ದೇವರಿಗೆ ಸಮಾನವಾದ ವ್ಯಕ್ತಿ ಅಶೋಕ ಮಹಾಶಯ ಎನ್ನುವ ಖಚಿತ ದಾಖಲೆಯನ್ನು ನೀಡುವ ಏಕೈಕ ಶಿಲಾ ಶಾಸನ ಕರ್ನಾಟಕದ ಲಿಂಗಸೂಗೂರು ಸಮೀಪದ ಮಸ್ಕಿಯಲ್ಲಿ ಸಿಕ್ಕಿದೆ. ಆ ಶಾಸನದ ಪ್ರತಿಕೃತಿ ಕೊಲಾಜ್ ನವದೆಹಲಿಯ ನೂತನ ಸಂಸತ್ ಭವನದಲ್ಲಿ ಅನುಷ್ಠಾನಗೊಳಿಸಲಾಗಿದೆ. ಸಂಸತ್ತಿನಲ್ಲಿ ಕರ್ನಾಟಕದ ನೆನಪನ್ನು ಇದು ಚಿರಕಾಲ ಉಳಿಸಲಿದೆ.

ಶಾಸನದ ಕೊಲಾಜ್‌ನಲ್ಲಿ ಕಲಬುರಗಿ ಜಿಲ್ಲೆಯ ಸನ್ನತಿಯ ಶಿಲ್ಪಶಾಸನವೂ ಸೇರಿದೆ. ಅದರಲ್ಲಿ ಸಾಮ್ರಾಟ ಅಶೋಕನ ಕುಟುಂಬದ ಸದಸ್ಯರ ಚಿತ್ರ ಇರುವುದು ಮತ್ತೊಂದು ವಿಶೇಷ. ದೇಶದ ಶಾಸನ ರೂಪಿಸುವ ಮಹಾಮನೆಯಲ್ಲಿ ರಾಜ್ಯದ ರಾಯಚೂರಿನ ಮಸ್ಕಿ ಮತ್ತು ಕಲಬುರಗಿಯ ಸನ್ನತಿ ಸ್ಥಾನ ಪಡೆದಿರುವುದು ಸ್ಮರಣೀಯ. ಮಸ್ಕಿ ಮತ್ತು ಸನ್ನತಿ ಸುಮಾರು 2,500 ವರ್ಷಗಳ ಹಳೆಯ ಶಿಲಾಶಾಸನಗಳಿಗೆ ಒಡಲು ನೀಡಿದ ಕಾರಣಕ್ಕೆ ಮಾತ್ರ ಚಾರಿತ್ರಿಕವಾಗಿಲ್ಲ. ಆ ಪ್ರದೇಶದ ಸುತ್ತ ಮುತ್ತ ಶಿಲಾಯುಗದ ಆಧಾರಗಳೂ ಸಿಕ್ಕಿರುವುದು ಅಷ್ಟೇ ಮುಖ್ಯ.

ಮಸ್ಕಿ ಶಾಸನ ಪ್ರಾಕೃತ ಭಾಷೆಯಲ್ಲಿದ್ದು, ಬ್ರಾಹ್ಮಿ ಲಿಪಿಯಲ್ಲಿ ಬರೆಯಲಾಗಿದೆ. ಗೌತಮ ಬುದ್ಧ ಬೋಧನೆಗೆ ಪ್ರಾಕೃತ ಭಾಷೆಯನ್ನೇ ತಮ್ಮ ಮಾಧ್ಯಮವನ್ನಾಗಿ ಬಳಸಿದ್ದರು. ಬುದ್ಧರ ಭಾಷೆಯನ್ನೇ ಅಶೋಕ ಸಹ ಅಧಿಕೃತವಾಗಿ ಬಳಸುತ್ತಿದ್ದ. ಅಂದರೆ, ಆ ಕಾಲಕ್ಕೆ ಪ್ರಾಕೃತ ಜನಪದರಲ್ಲಿ ಜನಪ್ರಿಯ ಭಾಷೆ ಎನ್ನುವ ಸೂಕ್ಷ್ಮವನ್ನು ಅನಾವರಣ ಮಾಡುತ್ತದೆ. ಈ ಶಾಸನ ‘ದೇವನಾಂಪ್ರಿಯ’ ಬೇರೆ ಯಾರೂ ಅಲ್ಲ, ಅದು ಅಶೋಕ ಎನ್ನುವ ಸ್ಪಷ್ಟನೆಯನ್ನು ನೀಡುವ ಕಾರಣಕ್ಕೆ ಪ್ರಾಚೀನ ಭಾರತದ ಚರಿತ್ರೆಯನ್ನು ಕಟ್ಟುವ ತಜ್ಞರಿಗೆ ಬಹುಮುಖ್ಯ ಆಕರವಾಗಿದೆ. ಇದೇ ಕಾರಣಕ್ಕಾಗಿ ಚಾರಿತ್ರಿಕ ಮಹತ್ವವನ್ನು ಪಡೆದಿದ್ದ ಈ ಶಾಸನದ ಪ್ರತಿರೂಪ ಸಂಸತ್ ಭವನದಲ್ಲಿ ಅನಾವರಣ ಆಗಿದ್ದರಿಂದ ಸ್ವಾತಂತ್ರ್ಯೋತ್ತರ ಭಾರತದಲ್ಲಿಯೂ ಅದರ ಮಹತ್ವವನ್ನು ಸಾರುವಂತೆ ಆಗಿದೆ.

ಫೋಟೊಗಳೇ ಇಲ್ಲದ ಆ ಕಾಲದಲ್ಲಿ ಅಶೋಕನ ಕುಟುಂಬಸ್ಥರ ಚಿತ್ರ ಇರುವ ಅಪರೂಪದ ಶಾಸನ ಸನ್ನತಿಯಲ್ಲಿ ಸಿಕ್ಕಿದೆ. ಅದು ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಭೀಮಾ ನದಿಯ ದಡದಲ್ಲಿದೆ. ಅದರ ಮೇಲೆ ಅಶೋಕನ ಪತ್ನಿ ಹಾಗೂ ಇಬ್ಬರು ಮಕ್ಕಳಿರುವ ಚಿತ್ರವನ್ನು ಕೆತ್ತಲಾಗಿದೆ. ಈ ಶಾಸನಗಳ ಪ್ರತಿಕೃತಿಯ ಜೊತೆಗೆ ಮೌರ್ಯ ಮತ್ತು ಶಾತವಾಹನರು ಆಳ್ವಿಕೆ ನಡೆಸಿದ ಭೂ ವಿಸ್ತಾರದ ನಕ್ಷೆಯನ್ನೂ ಹಾಕಿದ್ದಾರೆ. ಆ ಮೂಲಕ ಪ್ರಾಚೀನ ಭಾರತ ಇತಿಹಾಸದಲ್ಲಿ ರಾಜಕೀಯ ಸ್ವರೂಪ ಹೇಗಿತ್ತು ಎನ್ನುವ ಚಿಂತನೆಯನ್ನು ಇದು ಹೊರಹೊಮ್ಮಿಸಬಹುದು.

ಮೌರ್ಯ ವಂಶದ ಮೂರನೇ ದೊರೆ ಅಶೋಕ. ಕ್ರಿ.ಪೂ. 272–232ರ ಅವಧಿಯಲ್ಲಿ ತನ್ನ ಆಳ್ವಿಕೆಯನ್ನು ಮಾಡಿದ. ಕಳಿಂಗ ಯುದ್ಧದ ನಂತರ ಆತ ಕಂಡ ಹಿಂಸಾ ರೂಪ ಯುದ್ಧವನ್ನು ತ್ಯಜಿಸಿ ಬೌದ್ಧಧರ್ಮ ಪ್ರಸಾರಕ್ಕಾಗಿ ತನ್ನನ್ನು ಅರ್ಪಿಸಿಕೊಳ್ಳುವಂತೆ ಮಾಡಿತು. ಇಂದಿನ ಬಿಹಾರದ ಪಾಟಲಿಪುತ್ರವನ್ನು (ಪಟ್ನಾ) ಕೇಂದ್ರವನ್ನಾಗಿ ಇಟ್ಟುಕೊಂಡು ಆಡಳಿತ ನಡೆಸಿದ ಆತ ದಕ್ಷಿಣಕ್ಕೆ ಕರ್ನಾಟಕದ ಕಲಬುರಗಿ ಗಡಿ ಮೀರಿ ಸಾಮ್ರಾಜ್ಯವನ್ನು ವಿಸ್ತರಿಸಿದ್ದ. ಕರ್ನಾಟಕದಲ್ಲಿ ಆತನ ಹನ್ನೊಂದು ಶಾಸನಗಳು ಸಿಕ್ಕಿವೆ. ■